ಸಚಿವರುಗಳಿಗೆ ಸರ್ಕಾರಿ ವಸತಿ ಗೃಹಗಳ ನೀಡಿಕೆ

27 (238)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ (ಸೋಮವಾರಪೇಟೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಮುಖ್ಯಮಂತ್ರಿ ಹಾಗೂ ಸಚಿವರುಗಳಿಗೆ ನೀಡಿರುವ ಸರ್ಕಾರಿ ನಿವಾಸಗಳ ವಿವರ ನೀಡಿ (ಖಾಸಗಿ ಸೇರಿ)

ಆ) ಖಾಸಗಿ ಮನೆಗಳಿಗೆ ನಿಗಧಿಯಾಗಿರುವ ಬಾಡಿಗೆ ಎಷ್ಟು?

ಇ) ಪ್ರತಿ ಮನೆಯ ಆಧುನೀಕರಣಕ್ಕೆ ವಾಸ್ತು ಪ್ರಕಾರ ಮಾರ್ಪಡಿಸಲು ಸೇರಿ ತಗುಲಿದ ವೆಚ್ಚವೆಷ್ಟು? ಪೀಠೋಪಕರಣ ಖರೀದಿಗೆ ನೆಲಹಾಸು, ಅಡಿಗೆ ಸಾಮಾನು, ಟಿ.ವಿ. ಇತ್ಯಾದಿ ಖರೀದಿಸಲು ಮಾಡಿದ ವೆಚ್ಚವೆಷ್ಟು?

ಈ) ಈ ಹಿಂದಿನ ಸಂಪುಟದ ಸಚಿವರಿಂದ ಬರಬೇಕಾದ ಬಾಕಿ ಎಷ್ಟು? ವಿವರ ನೀಡುವುದು.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಮಾಹಿತಿಯನ್ನು ಅನುಬಂಧ-'ಅ'ದಲ್ಲಿ ನೀಡಲಾಗಿದೆ.

ಆ) ಗರಿಷ್ಠ ರೂ.25,000-00 ಮಾಸಿಕ.

ಇ) ಮಾಹಿತಿಯನ್ನು ಅನುಬಂದ- 'ಆ'ದಲ್ಲಿ ನೀಡಲಾಗಿದೆ.

ಈ) ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

ಅನುಬಂಧ - ಅ

ಮಾನ್ಯ ಸಚಿವರುಗಳಿಗೆ ಹಂಚಿಕೆ ಮಾಡಿರುವ ಅಧಿಕೃತ ನಿವಾಸಗಳ ವಿವರಣಾ ಪಟ್ಟಿ :

| ಕ್ರ.ಸ | ಸಚಿವರುಗಳ ಹೆಸರು ಹಾಗೂ ಖಾತೆ | ಹಂಚಿಕೆ ಮಾಡಲಾದ ನಿವಾಸದ ವಿವರ |
|---|---|---|
| 1 | 2 | 3 |
| 1 | ಶ್ರೀ ಎಸ್.ಎಂ.ಕೃಷ್ಣ<br>ಮಾನ್ಯ ಮುಖ್ಯಮಂತ್ರಿಗಳು | ಕೆ.ಕೆ.ಅನೆಕ್ಸ್, ನಂ.2 (ಅನುಗ್ರಹ)<br>ಹೈಗ್ರೌಂಡ್ಸ್, ಬೆಂಗಳೂರು |
| 2 | ಶ್ರೀ ಧರ್ಮಸಿಂಗ್<br>ಮಾನ್ಯ ಲೋಕೋಪಯೋಗಿ ಸಚಿವರು | ಕೆ.ಕೆ.ಅನೆಕ್ಸ್, ನಂ.1 (ದಕ್ಷಿಣ)<br>ಮೂರು ಸಚಿವರುಗಳ<br>ನಿವಾಸಗಳು. |
| 3 | ಶ್ರೀ ಕೆ.ಹೆಚ್.ರಂಗನಾಥ್<br>ಮಾನ್ಯ ಅರಣ್ಯ ಸಚಿವರು | ಕೆ.ಕೆಅನೆಕ್ಸ್, ನಂ.2 (ದಕ್ಷಿಣ)<br>ಮೂರು ಸಚಿವರ ನಿವಾಸಗಳು |
| 4 | ಶ್ರೀ ಹೆಚ್.ಸಿ.ಶ್ರೀಕಂಠಯ್ಯ<br>ಮಾನ್ಯ ಕಂದಾಯ ಸಚಿವರು | ಕೆ.ಕೆ.ಅನೆಕ್ಸ್, ನಂ.3 (ದಕ್ಷಿಣ)<br>ಮೂರು ಸಚಿವರ ನಿವಾಸಗಳು |
| 5 | ಶ್ರೀ ಹೆಚ್.ಕೆ.ಪಾಟೀಲ್<br>ಮಾನ್ಯ ಭಾರಿ ಮತ್ತು ಮಧ್ಯಮ<br>ನೀರಾವರಿ ಸಚಿವರು | ಗೃಹ ಮಂಡಳಿ ವಸತಿ ಸಂಖ್ಯೆ 2,<br>ಕ್ರೆಸೆಂಟ್ ರಸ್ತೆ, ಬೆಂಗಳೂರು |
| 6 | ಶ್ರೀ ಡಿ.ಬಿ.ಚಂದ್ರೇಗೌಡ<br>ಮಾನ್ಯ ಕಾನೂನು ಮತ್ತು<br>ಸಂಸದೀಯ ವ್ಯವಹಾರಗಳ ಸಚಿವರು | ಗೃಹ ಮಂಡಳಿ ನಿವಾಸ ಸಂಖ್ಯೆ 3,<br>ಕ್ರೆಸೆಂಟ್ ರಸ್ತೆ, ಬೆಂಗಳೂರು |
| 7 | ಶ್ರೀ ಮಲ್ಲಿಕಾರ್ಜುನ ಖರ್ಗೆ<br>ಮಾನ್ಯ ಗೃಹ ಸಚಿವರು | ರೇಸ್ ವ್ಯೂ ಬಿಲ್ಡಿಂಗ್<br>ರೇಸ್‌ಕೋರ್ಸ್ ರಸ್ತೆ,<br>ಬೆಂಗಳೂರು |
| 8 | ಶ್ರೀ ರಮಾನಾಥ್ ರೈ<br>ಮಾನ್ಯ ಮೀನುಗಾರಿಕೆ ಬಂದರು<br>ಹಾಗೂ ಪ್ರದೇಶಾಭಿವೃದ್ಧಿ ಸಚಿವರು | ನಂ.ಬಿ-2, ಜಯಮಹಲ್<br>ಬಡಾವಣೆ ಬೆಂಗಳೂರು |

| | | |
|---|---|---|
| 9 | ಶ್ರೀ ಆರ್.ವಿ.ದೇಶಪಾಂಡೆ<br>ಮಾನ್ಯ ಭಾರಿ ಮತ್ತು ಮಧ್ಯಮ<br>ಕೈಗಾರಿಕಾ ಸಚಿವರು | ನಂ. 1, ಸಪ್ತಸಚಿವರ ನಿವಾಸಗಳು,<br>ಸ್ಯಾಂಕಿ ರಸ್ತೆ, ಬೆಂಗಳೂರು |
| 10 | ಶ್ರೀ ಎ.ಬಿ.ಮಲಕಾರೆಡ್ಡಿ<br>ಮಾನ್ಯ ಆರೋಗ್ಯ ಮತ್ತು<br>ಕುಟುಂಬ ಕಲ್ಯಾಣ ಸಚಿವರು | ನಂ. 3, ಸಪ್ತ ಸಚಿವರುಗಳ<br>ನಿವಾಸಗಳು ಸ್ಯಾಂಕಿ ರಸ್ತೆ,<br>ಬೆಂಗಳೂರು |
| 11 | ಶ್ರೀ ಎ.ಎಂ.ಹಿಂಡಸಗೇರಿ<br>ಮಾನ್ಯ ಕಾರ್ಮಿಕ ಹಾಗೂ<br>ವಕ್ಫ್ ಸಚಿವರು | ನಂ.4, ಸಪ್ತಸಚಿವರ ನಿವಾಸಗಳು<br>ಸ್ಯಾಂಕಿರಸ್ತೆ, ಬೆಂಗಳೂರು |
| 12 | ಶ್ರೀ ಎಂ.ವೈ.ಘೋರ್ಪಡೆ<br>ಮಾನ್ಯ ಗ್ರಾಮೀಣಾಭಿವೃದ್ಧಿ<br>ಮತ್ತು ಪಂಚಾಯತ್ ರಾಜ್ ಸಚಿವರು | ನಂ. 5, ಸಪ್ತಸಚಿವರುಗಳ<br>ನಿವಾಸಗಳು, ಸ್ಯಾಂಕಿ ರಸ್ತೆ,<br>ಬೆಂಗಳೂರು |
| 13 | ಶ್ರೀ ಹೆಚ್.ವಿಶ್ವನಾಥ್<br>ಮಾನ್ಯ ಪ್ರಾಥಮಿಕ ಮತ್ತು ಪ್ರೌಢ<br>ಶಿಕ್ಷಣ ಸಚಿವರು. | ನಂ.6, ಸಪ್ತ ಸಚಿವರ<br>ನಿವಾಸಗಳು, ಸ್ಯಾಂಕಿರಸ್ತೆ,<br>ಬೆಂಗಳೂರು |
| 14 | ಶ್ರೀ ವಿ.ಮುನಿಯಪ್ಪ<br>ಮಾನ್ಯ ಗಣಿ ಮತ್ತು ಭೂ ವಿಜ್ಞಾನ<br>ಸಚಿವರು | ನಂ.7, ಸಪ್ತಸಚಿವರ ನಿವಾಸಗಳು,<br>ಸ್ಯಾಂಕಿರಸ್ತೆ, ಬೆಂಗಳೂರು |
| 15 | ಶ್ರೀ ಆರ್.ರೋಷನ್ ಬೇಗ್<br>ಮಾನ್ಯ ಪ್ರವಾಸೋದ್ಯಮ ಮತ್ತು<br>ಹಜ್ ಸಚಿವರು | ನಂ.94-ಎ, 9ನೇ ಅಡ್ಡ ರಸ್ತೆ,<br>ಆರ್.ಎಂ.ವಿ 2ನೇ ಹಂತ,<br>ಬೆಂಗಳೂರು |
| 16 | ಶ್ರೀ ಟಿ.ಬಿ.ಜಯಚಂದ್ರ<br>ಮಾನ್ಯ ಕೃಷಿ ಸಚಿವರು | ನಂ.278, 17ನೇ ಮುಖ್ಯರಸ್ತೆ,<br>ಸದಾಶಿವನಗರ, ಬೆಂಗಳೂರು |
| 17 | ಶ್ರೀ ಸಗೀರ್ ಅಹಮದ್<br>ಮಾನ್ಯ ಸಾರಿಗೆ ಸಚಿವರು | ನಿವಾಸ ಸಂಖ್ಯೆ ಬಿ-3<br>ಜಯಮಹಲ್ ಬಡಾವಣೆ<br>ಬೆಂಗಳೂರು |

| | | |
|---|---|---|
| 18 | ಶ್ರೀ ಡಿ.ಕೆ.ಶಿವಕುಮಾರ್<br>ಮಾನ್ಯ ಸಹಕಾರ ಸಚಿವರು | ನಿವಾಸ ಸಂಖ್ಯೆ 31, ಸ್ಯಾಂಕಿರಸ್ತೆ<br>ಬೆಂಗಳೂರು |
| 19 | ಶ್ರೀ ವೀರಕುಮಾರ್ ಎ.ಪಾಟೀಲ್<br>ಮಾನ್ಯ ಇಂಧನ ರಾಜ್ಯ ಸಚಿವರು | ನಂ.511, 7ನೇ ಮುಖ್ಯರಸ್ತೆ<br>ಹೊಸ ಬಿಇಎಲ್ ರಸ್ತೆ<br>(ಹೆಚ್ಐಜಿ), ಆರ್ಎಂವಿ 2ನೇ<br>ಹಂತ, ಬೆಂಗಳೂರು. |
| 20 | ಶ್ರೀ ಬಾಬುರಾವ್ ಬಸವಣ್ಣಪ್ಪ<br>ಚಿಂಚಣಸೂರ್,<br>ಮಾನ್ಯ ಸಣ್ಣ ಉಳಿತಾಯ,<br>ಮುಜರಾಯಿ ಮತ್ತು ಬಂದೀಖಾನೆ<br>ರಾಜ್ಯ ಸಚಿವರು | ನಂ.173, 1ನೇ ಬ್ಲಾಕ್, 2ನೇ<br>ಹಂತ, ಆರ್.ಎಂ.ವಿ ಬಡಾವಣೆ,<br>ಬೆಂಗಳೂರು |
| 21 | ಶ್ರೀ ಆರ್.ಬಿ.ತಿಮ್ಮಾಪೂರ<br>ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ<br>ಸಚಿವರು | ನಂ.154, 10ನೇ ಅಡ್ಡರಸ್ತೆ,<br>ಆರ್ಎಂವಿ 2ನೇ ಹಂತ, 3ನೇ<br>ಮುಖ್ಯರಸ್ತೆ, ಬೆಂಗಳೂರು |
| 22 | ಶ್ರೀ ಎಂ.ಮಲ್ಲಿಕಾರ್ಜುನ<br>ಮಾನ್ಯ ನಗರಾಭಿವೃದ್ಧಿ ರಾಜ್ಯ<br>ಸಚಿವರು | ನಂ.117, ''ಸಿರಿ ನಿಲಯ'' 1ನೇ<br>ಮುಖ್ಯರಸ್ತೆ, ಮಠದಹಳ್ಳಿ<br>ಬಡಾವಣೆ, ಆರ್.ಟಿ.ನಗರ,<br>ಬೆಂಗಳೂರು |
| 23 | ಶ್ರೀಮತಿ .ಸುಮಾ ವಸಂತ<br>ಮಾನ್ಯ ಯೋಜನಾ ರಾಜ್ಯ<br>ಸಚಿವರು | ನಂ.396, 2ನೇ ಕ್ರಾಸ್,<br>ಆರ್.ಎಂ.ವಿ 2ನೇ ಹಂತ,<br>ಬೆಂಗಳೂರು. |
| 24 | ಶ್ರೀಮತಿ ಮೋಟಮ್ಮ<br>ಮಾನ್ಯ ಮಹಿಳಾ ಮತ್ತು ಮಕ್ಕಳ<br>ಕಲ್ಯಾಣ ಸಚಿವರು | ನಂ.298, 14ನೇ ಕ್ರಾಸ್, 5ನೇ<br>ಮುಖ್ಯ ರಸ್ತೆ, ಆರ್.ಎಂ.ವಿ 2ನೇ<br>ಹಂತ, ಬೆಂಗಳೂರು |
| 25 | ಶ್ರೀ. ಖಮರುಲ್ ಇಸ್ಲಾಂ<br>ಮಾನ್ಯ ವಸತಿ ಸಚಿವರು | ನಂ.161, ಆರ್.ಟಿ.ನಗರ<br>ಮುಖ್ಯರಸ್ತೆ ಮಠದಹಳ್ಳಿ,<br>ಬಡಾವಣೆ ಬೆಂಗಳೂರು - 32 |

| | | |
|---|---|---|
| 26 | ಶ್ರೀ ಅಲ್ಲಂ ವೀರಭದ್ರಪ್ಪ<br>ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು | ನಂ.815-ಎ ''ಶ್ರೀ ರಾಯರ ಅನುಗ್ರಹ'' 3ನೇ ಮುಖ್ಯರಸ್ತೆ, ಇ-ಬ್ಲಾಕ್, ಸುಬ್ರಮಣ್ಯನಗರ 2ನೇ ಹಂತ, ರಾಜಾಜಿನಗರ, ಬೆಂಗಳೂರು - 10 |
| 27 | ಶ್ರೀ ಎಂ.ಎಂ.ನಾಣಯ್ಯ<br>ಮಾನ್ಯ ಅಬ್ಕಾರಿ ರಾಜ್ಯ ಸಚಿವರು | ನಂ.392, 2ನೇ ಬ್ಲಾಕ್, 80 ಅಡಿ ರಸ್ತೆ, ಆರ್.ಎಂ.ವಿ 2ನೇ ಹಂತ, ಬೆಂಗಳೂರು |
| 28 | ಶ್ರೀ ಎಂ.ಮಹದೇವ್<br>ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು | ನಂ.36, 60 ಅಡಿ ರಸ್ತೆ, ಆರ್.ಎಂ.ವಿ, 2ನೇ ಹಂತ, ಬೆಂಗಳೂರು |
| 29 | ಶ್ರೀ ಎಂ.ದಿವಾಕರ್‌ಬಾಬು<br>ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು | ನಂ.25, 2ನೇ ಮುಖ್ಯರಸ್ತೆ ಶೇಷಾದ್ರಿಪುರಂ ಬೆಂಗಳೂರು |
| 30 | ಶ್ರೀ ಎಂ.ಶಿವಣ್ಣ<br>ಮಾನ್ಯ ಹಣಕಾಸು ರಾಜ್ಯ ಸಚಿವರು | ನಂ.157, ಹಚ್.ಐ.ಜಿ. ಹೌಸಿಂಗ್, 10ನೇ ಕ್ರಾಸ್, ಆರ್.ಎಂ.ವಿ. 2ನೇ ಹಂತ, ಬೆಂಗಳೂರು |

ಅನುಬಂಧ - ಆ

ಮಾನ್ಯ ಸಚಿವರುಗಳಿಗೆ ನಿವಾಸದ ಆಧುನಿಕರಣಕ್ಕಾಗಿ ಹಾಗೂ ಪೀಠೋಪಕರಣಕ್ಕಾಗಿ ಆದ ವೆಚ್ಚದ ವಿವರ :

| ಕ್ರ.ಸಂ | ಸಚಿವರುಗಳ ಹೆಸರು ಹಾಗೂ ಖಾತೆ | ಆಧುನೀಕರಣಕ್ಕೆ | | ಪೀಠೋಪಕರಣ, ಅಡಿಗೆ ಸಾಮಾನು, ನೆಲಹಾಸು, ಟಿವಿ | |
|---|---|---|---|---|---|
| | | ತಗಲುವ ಅಂದಾಜು ವೆಚ್ಚ | ಹಾಲಿ ಆಗಿರುವ ವೆಚ್ಚ | ಪಾವತಿಸ ಬೇಕಾಗಿ ಇರುವ ಬಿಲ್ಲುಗಳ ಮೊತ್ತ | ಪಾವತಿಸಿರುವ ಬಿಲ್ಲುಗಳ ಮೊತ್ತ |
| 1 | 2 | 3 | 4 | 5 | 6 |
| 1 | ಶ್ರೀ ಎಸ್. ಎಂ. ಕೃಷ್ಣ<br>ಮಾನ್ಯ ಮುಖ್ಯಮಂತ್ರಿಗಳು | 14.07 | - | 3.27 | - |
| 2 | ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ<br>ಗೃಹ ಸಚಿವರು | 8.40 | - | - | - |

| | | | | | |
|---|---|---|---|---|---|
| 3 | ಶ್ರೀ ಹೆಚ್.ಕೆ.ಪಾಟೀಲ್<br>ಮಾನ್ಯ ಭಾರೀ ಮತ್ತು ಮಧ್ಯಮ<br>ನೀರಾವರಿ ಸಚಿವರು | 3.60 | - | 4.86 | - |
| 4 | ಶ್ರೀ ಎಂ.ವೈ.ಘೋರ್ಪಡೆ<br>ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು<br>ಪಂಚಾಯತ್ ರಾಜ್ ಸಚಿವರು | 1.98 | - | 3.16 | - |
| 5 | ಶ್ರೀ ಕೆ.ಹೆಚ್.ರಂಗನಾಥ್<br>ಮಾನ್ಯ ಅರಣ್ಯ ಮತ್ತು ಪರಿಸರ<br>ಮಾಲೀನ್ಯ ಸಚಿವರು | 7.36 | - | 3.15 | - |
| 6 | ಶ್ರೀಮತಿ ಮೋಟಮ್ಮ<br>ಮಾನ್ಯ ಮಹಿಳಾ ಮತ್ತು ಮಕ್ಕಳ<br>ಕಲ್ಯಾಣ ಸಚಿವರು | - | - | 3.36 | - |
| 7 | ಶ್ರೀ ಚಿಮ್ಮನಕಟ್ಟಿ ಬಾಳಪ್ಪ ಭೀಮಪ್ಪ<br>ಮಾನ್ಯ ನಗರಾಭಿವೃದ್ಧಿ ಸಚಿವರು | - | - | - | - |
| 8 | ಶ್ರೀ ಕಾಗೋಡು ತಿಮ್ಮಪ್ಪ<br>ಮಾನ್ಯ ಸಮಾಜಕಲ್ಯಾಣ ಸಚಿವರು | - | - | - | - |

| | | | | | |
|---|---|---|---|---|---|
| 9 | ಶ್ರೀ ಹೆಚ್.ವಿಶ್ವನಾಥ್<br>ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು | 1.79 | - | 3.25 | - |
| 10 | ಶ್ರೀ ಧರ್ಮಸಿಂಗ್<br>ಮಾನ್ಯ ಲೋಕೋಪಯೋಗಿ ಸಚಿವರು | 8.60 | - | 4.60 | - |
| 11 | ಶ್ರೀ ಎ.ಕೃಷ್ಣಪ್ಪ<br>ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು | - | - | - | - |
| 12 | ಶ್ರೀ ಸಗೀರ್ ಅಹಮದ್<br>ಮಾನ್ಯ ಸಾರಿಗೆ ಸಚಿವರು | 1.80 | - | 2.76 | - |
| 13 | ಶ್ರೀ ಆರ್.ರೋಷನ್‌ಬೇಗ್<br>ಮಾನ್ಯ ಪ್ರವಾಸೋದ್ಯಮ ಸಚಿವರು | - | - | 4.55 | - |
| 14 | ಶ್ರೀ ಖಿಮರುಲ್ಲಾ ಇಸ್ಲಾಂ<br>ಮಾನ್ಯ ವಸತಿ ಸಚಿವರು | - | - | 0.87 | - |
| 15 | ಶ್ರೀ ಎಂ.ಎಂ.ಹಿಂಡಸಗೇರಿ<br>ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು | 1.90 | - | 4.07 | - |

| | | | | | |
|---|---|---|---|---|---|
| 16 | ಶ್ರೀ .ಆರ್.ವಿ.ದೇಶಪಾಂಡೆ<br>ಮಾನ್ಯ ಭಾರಿ ಮತ್ತು ಮಧ್ಯಮ<br>ಕೈಗಾರಿಕಾ ಸಚಿವರು | 1.95 | - | 0.65 | - |
| 17 | ಡಾ : ಎ.ಜೆ ಮಲಕರೆಡ್ಡಿ<br>ಮಾನ್ಯ ಆರೋಗ್ಯ ಮತ್ತು<br>ಕುಟುಂಬ ಕಲ್ಯಾಣ ಸಚಿವರು | 2.36 | - | 3.10 | - |
| 18 | ಶ್ರೀ ಕಾಶಪ್ಪನವರ್<br>ಮಾನ್ಯ ಸಣ್ಣ ಕೈಗಾರಿಕಾ ಸಚಿವರು | - | - | - | - |
| 19 | ಶ್ರೀ ಹೆಚ್.ಸಿ.ಶ್ರೀಕಂಠಯ್ಯ<br>ಮಾನ್ಯ ಕಂದಾಯ ಸಚಿವರು | 8.54 | - | - | - |
| 20 | ಶ್ರೀ ಡಿ.ಬಿ.ಚಂದ್ರೇಗೌಡ<br>ಮಾನ್ಯ ಕಾನೂನು ಮತ್ತು<br>ಸಂಸದೀಯ ವ್ಯವಹಾರಗಳ ಸಚಿವರು | 1.50 | - | 4.99 | - |
| 21 | ಶ್ರೀ ಟಿ.ಬಿ.ಜಯಚಂದ್ರ<br>ಮಾನ್ಯ ಕೃಷಿ ಸಚಿವರು | - | - | 2.60 | - |
| 22 | ಶ್ರೀ ಡಿ.ಕೆ.ಶಿವಕುಮಾರ್<br>ಮಾನ್ಯ ಸಹಕಾರ ಸಚಿವರು | 5.90 | - | 4.58 | - |

| | | | | | |
|---|---|---|---|---|---|
| 23 | ಶ್ರೀ ವಿ.ಮುನಿಯಪ್ಪ<br>ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು | 2.67 | - | 3.35 | - |
| 24 | ಶ್ರೀ ಎಂ.ಮಹದೇವ್<br>ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು | - | - | 2.01 | - |
| 25 | ಶ್ರೀ ರಮಾನಾಥ ರೈ<br>ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು | 1.71 | - | 3.92 | - |
| ರಾಜ್ಯ ಸಚಿವರು | | | | | |
| 26 | ಡಾ: ಜಿ.ಪರಮೇಶ್ವರ್<br>ಮಾನ್ಯ ಉನ್ನತ ಶಿಕ್ಷಣ ಸಚಿವರು | - | - | 0.31 | - |
| 27 | ಪ್ರೊ.ಬಿ.ಕೆ.ಚಂದ್ರಶೇಖರ್<br>ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು | - | - | - | - |
| 28 | ಶ್ರೀ. ತಿಮ್ಮಾಪುರ ಆರ್.ಜಿ<br>ಮಾನ್ಯ ಕೃಷಿ ಮಾರುಕಟ್ಟೆ ಸಚಿವರು | - | - | 1.40 | - |

| | | | | | |
|---|---|---|---|---|---|
| 29 | ಶ್ರೀ ಎಂ.ಶಿವಣ್ಣ<br>ಮಾನ್ಯ ಹಣಕಾಸು ಸಚಿವರು | - | - | 1.76 | - |
| 30 | ಶ್ರೀಮತಿ ಸುಮಾ ವಸಂತ್<br>ಮಾನ್ಯ ಯೋಜನಾ ಸಚಿವರು | - | - | 4.98 | - |
| 31 | ಶ್ರೀ ಎಸ್.ಕುಮಾರ್ ಬಂಗಾರಪ್ಪ<br>ಮಾನ್ಯ ಸಣ್ಣ ನೀರಾವರಿ ಸಚಿವರು | - | - | - | - |
| 32 | ಶ್ರೀ ಎಸ್.ಮಲ್ಲಿಕಾರ್ಜುನ<br>ಮಾನ್ಯ ಯುವಜನ ಮತ್ತು ಕ್ರೀಡಾ ಸಚಿವರು | - | - | - | - |
| 33 | ಶ್ರೀ ಡಿ.ಜಿ.ಇನಾಂದಾರ್<br>ಮಾನ್ಯ ಆಹಾರ ಮತ್ತು ನಾಗರೀಕ<br>ಸರಬರಾಜು ಸಚಿವರು | - | - | 2.16 | - |
| 34 | ಶ್ರೀ ಬಾಬುರಾವ್ ಬಸವಣ್ಣಪ್ಪ<br>ಚಿಂಚನಸೂರ್<br>ಮಾನ್ಯ ಸಣ್ಣ ಉಳಿತಾಯ ಮತ್ತು<br>ಲಾಟರಿ ಸಚಿವರು | - | - | 3.64 | 1.12 |
| 35 | ಶ್ರೀ ಅಲ್ಲಂ ವೀರಭದ್ರಪ್ಪ<br>ಮಾನ್ಯ ತೋಟಗಾರಿಕೆ ಸಚಿವರು | - | - | - | - |

| | | | | | |
|---|---|---|---|---|---|
| 36 | ಶ್ರೀ ಟಿ.ಜಾನ್<br>ಮಾನ್ಯ ಮೂಲಭೂತ ಸೌಲಭ್ಯ<br>ಅಭಿವೃದ್ಧಿ ಸಚಿವರು | - | - | - | - |
| 37 | ಶ್ರೀ ಬಾಬುರಾವ್ ಚವಾಣ್<br>ಮಾನ್ಯ ಸಮಾಜ ಕಲ್ಯಾಣ ಸಚಿವರು | - | - | - | - |
| 38 | ಶ್ರೀ ಎಂ.ಎಂ.ನಾಣಯ್ಯ<br>ಮಾನ್ಯ ಅಬಕಾರಿ ಸಚಿವರು | - | - | - | - |
| 39 | ಶ್ರೀಮತಿ ರಾಣಿಸತೀಶ್<br>ಮಾನ್ಯ ಕನ್ನಡ ಮತ್ತು ಸಂಸ್ಕೃತಿ<br>ಸಚಿವರು | - | - | - | - |
| 40 | ಶ್ರೀಮತಿ ನಫೀಜಾ ಫಜಲ್<br>ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು | - | - | - | - |
| 41 | ಶ್ರೀ ಎಂ.ದಿವಾಕರ್‌ಬಾಬು<br>ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು | - | - | - | - |
| 42 | ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ<br>ಮಾನ್ಯ ನಗರಾಭಿವೃದ್ಧಿ ಸಚಿವರು | - | - | - | - |

| | | | | | |
|---|---|---|---|---|---|
| 43 | ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್<br>ಮಾನ್ಯ ಇಂಧನ ಸಚಿವರು | - | - | 1.81 | - |
| | ಒಟ್ಟು | 74.13 | - | 77.00 | 3.28 |

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಸಮರ್ಪಕವಾಗಿಲ್ಲ ಎಂದು ಹೇಳುವ ಮಾತನ್ನು ಹೇಳಬೇಕಾಗುತ್ತದೆ. ನನ್ನ (ಈ) ಪ್ರಶ್ನೆ ಈ ಹಿಂದಿನ ಸಂಪುಟ ಸಚಿವರಿಂದ ಬರಬೇಕಾದ ಬಾಕಿ ಹಣ ಎಷ್ಟು? ವಿವರಗಳನ್ನು ನೀಡಿ ಎಂದು ಹೇಳಿದ್ದೇವೆ. ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಯಾವಾಗ ಉತ್ತರ ಸಂಗ್ರಹ ಮಾಡುತ್ತೀರಿ? ಯಾವಾಗ ಉತ್ತರ ಕೊಡುತ್ತೀರಿ? ಎರಡನೆಯದಾಗಿ ಮಂತ್ರಿಗಳು ವಾಸ್ತು ವಿಚಾರವಾಗಿ, ಆಧುನೀಕರಣ ವಿಚಾರವಾಗಿ ಖರ್ಚು ಮಾಡಿದ ಒಂದು ಕೋಟಿ 50 ಲಕ್ಷ ರೂಪಾಯಿಗಳಾಗುತ್ತದೆ. ಮಂತ್ರಿಗಳು ಮನೆಯ ವಾಸ್ತು ಮತ್ತು ಮನೆಯ ಆಧುನೀಕರಣದ ವಿಚಾರವಾಗಿ ಖರ್ಚು ಮಾಡುವಂತಹ ಹಣ ಸುಮಾರು ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳು ಆಗುತ್ತದೆಂದು ಅಂದಾಜು ಪಟ್ಟಿಯನ್ನು ಕೊಟ್ಟಿದ್ದೀರಿ. ಅದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ, ಎಷ್ಟು ಹಣದ ಬಿಲ್ ಪಾವತಿ ಮಾಡಿದ್ದೀರಿ, ಮತ್ತೆ ಕೆಲಸವನ್ನು ಪೂರ್ಣಗೊಳಿಸಲಾಗಿದೆಯೇ? ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ನಾವು ಎಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ಉತ್ತರ ಪಟ್ಟಿಯನ್ನು ಕೊಟ್ಟಿದ್ದೇವೆ. ಪ್ರತಿಯೊಂದು ಮಂತ್ರಿಗಳ ಮನೆಯ ವಿಳಾಸ ಮತ್ತು ಅದಕ್ಕೆ ತಗಲುವ ವೆಚ್ಚ ಎಷ್ಟು? ಪಾವತಿ ಮಾಡಬೇಕಾಗಿರುವ ಹಣವೆಷ್ಟು? ಎಂಬ ವಿವರಗಳನ್ನು ಕೊಟ್ಟಿದ್ದೇವೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ತಾವು ಅಂದಾಜು ಪಟ್ಟಿಯನ್ನು ಕೊಟ್ಟಿದ್ದೀರಿ. ತಾವು ಖರ್ಚು ಮಾಡಿ ಪೇಮೆಂಟ್ ಮಾಡಿದ್ದೀರಿ ಎಂಬ ಬಗ್ಗೆ ತಿಳಿಸಿಲ್ಲ. ಮತ್ತೆ ವಾಸ್ತುಗೋಸ್ಕರ ಇಷ್ಟು ಹಣವನ್ನು ಖರ್ಚು ಮಾಡಬಹುದೇ? ಇದು ಸಾರ್ವಜನಿಕರ ಹಣವಾಗಿದೆ. ಇದರಿಂದ ಸರ್ಕಾರವನ್ನು ಮುಂದುವರೆಸಿಕೊಂಡು ಬರುವುದಕ್ಕೆ ಆಗುತ್ತದೆಯೇ? ತಾವು ವಾಸ್ತು ಪ್ರಕಾರ ಮನೆಗಳನ್ನು ಕಟ್ಟಿದ್ದೀರಿ ಎಂದು ಪತ್ರಿಕೆಗಳಲ್ಲಿ ಬಂದಿದೆ. ಒಂದು ಪತ್ರಿಕೆಯಲ್ಲಿ ಸುಮಾರು ಅರವತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರೆಂದು ಬಂದಿದೆ.

ಅಧ್ಯಕ್ಷರು: ಮಾನ್ಯ ಅಧ್ಯಕ್ಷರೆ, ನಾವು ಮಾಹಿತಿಗಳನ್ನು ಸಂಪೂರ್ಣವಾಗಿ ಕೊಟ್ಟಿದ್ದಾರಲ್ಲಾ, ಪತ್ರಿಕೆಗಳಲ್ಲಿ ಆ ವಿಷಯವಾಗಿ ನೂರಾರು ಬಂದಿರಬಹುದು, ಅದು ಬೇರೆ ವಿಷಯ, ಈಗ ಅವರು ಇಲ್ಲಿ ಮಾಹಿತಿಯನ್ನು ಕೊಟ್ಟಿದ್ದಾರೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಅವರು ಮಾಹಿತಿಯಲ್ಲಿ ತಗಲುವ ವೆಚ್ಚವನ್ನು ಕೊಟ್ಟಿದ್ದಾರೆ, ಅಂದಾಜು ವೆಚ್ಚವನ್ನು ಕೊಟ್ಟಿಲ್ಲ.

ಶ್ರೀ ಎಸ್.ಎಂ.ಕೃಷ್ಣ: ಅಂದಾಜು ವೆಚ್ಚವನ್ನು ಅಷ್ಟೇ ಖರ್ಚು ಮಾಡಿರುತ್ತಾರೆ,

ಅದನ್ನು ಮೀರಿ ಯಾರೂ ಖರ್ಚು ಮಾಡುವುದಿಲ್ಲ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಆಡಳಿತದಲ್ಲಿ ಆ ರೀತಿಯಾದರೆ ತುಂಬಾ ಸಂತೋಷ ಪಡುವವನಾಗಿದ್ದೇನೆ. ಆದರೆ ರಾಜ್ಯದಲ್ಲಿ ಎಷ್ಟು ಎಸ್ಟಿಮೇಟ್ ಮಾಡಿರುತ್ತಾರೋ ಅಷ್ಟೇ ಎಸ್ಕ್ಯೂಲೇಷನ್ ಮಾಡಿ ತೆಗೆದುಕೊಳ್ಳುವಂತಹ ವ್ಯವಸ್ಥೆ ಇದೆಯೇ ಎನ್ನುವ ಭಯವಿದೆ. ಆದುದರಿಂದ, ಮಾನ್ಯ ಸದಸ್ಯರು ಎಷ್ಟು ಖರ್ಚು ಆಗಿದೆ ಎಂಬುದನ್ನು ಹೇಳಲಿ ಎಂಬುದು ಅವರ ಅಪೇಕ್ಷೆಯಾಗಿದೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ನಾವು ಉತ್ತರ ಪಟ್ಟಿಯಲ್ಲಿ ಎಷ್ಟು ನಮೂದು ಮಾಡಿದ್ದೇವೆ, ಅದನ್ನೇ ಖರ್ಚು ಎಂದು ಭಾವಿಸಬಹುದು.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಭಾವಿಸಬಹುದು ಎಂದು ಉತ್ತರವನ್ನು ಹೇಳುವುದು ಸಮರ್ಪಕವಾಗಿಲ್ಲ, ನಿರ್ದಿಷ್ಟವಾದ ಉತ್ತರವನ್ನು ಕೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಓದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅಲ್ಲಿ ವಾಸ್ತುಶಿಲ್ಪಕ್ಕೆ ಸಂಬಂಧಪಟ್ಟಹಾಗೆ ಸಬ್ಜೆಕ್ಟ್ ಇತ್ತೇ? ಈ ವಾಸ್ತು ಶಿಲ್ಪಕ್ಕೆ ಮತ್ತು ಮೂಡನಂಬಿಕೆಗೆ ಮುಖ್ಯಮಂತ್ರಿಯವರು ಇಷ್ಟು ಕಾಳಜಿ ವಹಿಸುತ್ತಾರೆಯೇ? ಹೀಗೆ ಆದರೆ ಕಳೆದ ಸಾರಿ 189 ಜನ ಶಾಸಕರು ಗೆದ್ದು ಬಂದು ಮೂರು ಜನ ಮುಖ್ಯಮಂತ್ರಿಗಳನ್ನು ನೋಡುವಂತೆ ಆಯಿತು. ತಾವು ಈ ಒಳಜಗಳವನ್ನು ನಿಲ್ಲಿಸಬೇಕೆ ಹೊರತು ಈ ಮೂಢನಂಬಿಕೆಗೋಸ್ಕರ, ವಾಸ್ತುಶಿಲ್ಪಕ್ಕೋಸ್ಕರ ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಂಥಾದ್ದು ಸಾಧುವಲ್ಲ.

ಅಧ್ಯಕ್ಷರು: ತಾವು ಮನೆಗಳ ಬಗ್ಗೆ ಮಾತ್ರ ಮಾತನಾಡಿ, ಮನೆಗಳಿಗೆ ಎಷ್ಟು ಖರ್ಚಾಗಿದೆ ಎಂಬುದನ್ನು ಕೇಳಿ, ಬೇರೆ ವಿಷಯಗಳ ಬಗ್ಗೆ ಏಕೆ ಕೇಳುತ್ತೀರಿ. ವಾಸ್ತುಗಳ ಬಗ್ಗೆ ಎಲ್ಲಾ ಏಕೆ?

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಅಧ್ಯಕ್ಷರೇ, ಇದು ಪತ್ರಿಕೆಗಳಲ್ಲಿ ಬಂದಿದೆ.

ಅಧ್ಯಕ್ಷರು: ಪತ್ರಿಕೆಗಳಲ್ಲಿ ನೂರಾರು ವಿಚಾರಗಳು ಬಂದಿರುತ್ತದೆ, ಬಂದಿರುವುದೆಲ್ಲಾ ಸರಿಯಾಗಿ ಇರುವುದಿಲ್ಲ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಅದನ್ನು ಅವರು ನಿರಾಕರಿಸಿಲ್ಲ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ನಾನು ಎಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ಡೀಟೈಲ್ಸ್ ಕೊಟ್ಟಿದ್ದೇನೆ. ಆ ಹಣವನ್ನು ಇನ್ನೂ ಕಂಟ್ರಾಕ್ಟ್‌ದಾರರಿಗೆ ಪಾವತಿ ಮಾಡಿಲ್ಲ. ಮಾನ್ಯ ಅಪ್ಪಚ್ಚು ರಂಜನ್‌ರವರೊಡನೆ ಒಬ್ಬ ಕಮೀಷನರ್‌ನ್ನು ಎನ್‌ಕ್ವೈರಿಗೆ ಕಳುಹಿಸುತ್ತೇನೆ. ಅವರು ಬೇಕಾದರೆ ಅವರೊಡನೆ ಹೋಗಿ ಎಲ್ಲೆಲ್ಲಿ ರಿಪೇರಿ ಮಾಡಿದ್ದಾರೆ, ಯಾವ ಆಧಾರದ ಮೇಲೆ ರಿಪೇರಿ ಮಾಡಿದ್ದಾರೆ. ಅದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ, ಎಂಬುದನ್ನು ನಮ್ಮ ಅಧಿಕಾರಿಗಳು ಮಾಡಿರುವಂತಹ ಕೆಲಸದ ಮೇಲೆ ಸೂಪರ್‌ವಿಷನ್ ಮಾಡಲಿ. ನಾನು ಅದಕ್ಕೆ ಅಥಾರಿಟಿ ಕೊಡುತ್ತೇನೆ; ಮತ್ತೆ ಎರಡನೆಯದಾಗಿ ಅಪ್ರಸ್ತುತವಾದಂತಹ ವಿಚಾರಗಳನ್ನು ಈ ಸದನದಲ್ಲಿ ತರುವುದರ ಮೂಲಕ ನೀವು ದೊಡ್ಡವರಾಗುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವಂತಹ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರಿಗೆ ನಮ್ಮ ಶಾಸಕರು ಕೆಲವೊಂದು ಮಾಹಿತಿಗಳನ್ನು ಮತ್ತು ಪ್ರಶ್ನೆಗಳನ್ನು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಕೊಡಬೇಕಾಗಿತ್ತು. ಈ ವಿಷಯವನ್ನು ಸಣ್ಣದಾಗಿ ತೆಗೆದುಕೊಳ್ಳಬಾರದು. ಇವತ್ತು ಮಂತ್ರಿಯವರ ಮನೆಯ ವಿಚಾರವಿರಬಹುದು, ಇನ್ನಾವ ವಿಷಯವೇ ಆಗಿರಬಹುದು. ಅದನ್ನು ನಾವು ಕೇಳುವಂತಹ ಹಕ್ಕು ಇದೆ, ಅದನ್ನು ಇಲ್ಲವೆಂದು ಹೇಳಿಬಿಟ್ಟರೆ ನಾವು ಏನು ಕೇಳುವುದಿಲ್ಲ.

ಅಧ್ಯಕ್ಷರು: ಅದನ್ನು ಕೇಳಿಯಾಗಿದೆ, ಅದಕ್ಕೆ ಉತ್ತರವೂ ಬಂದಿದೆಯಲ್ಲಾ....

(ಗೊಂದಲ)

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ನಮ್ಮ ಶಾಸಕರು ಪ್ರತಿ ಮನೆಯ ಆಧುನೀಕರಣಕ್ಕೆ ವಾಸ್ತು ಪ್ರಕಾರ ಮಾರ್ಪಡಿಸಲು ಸೇರಿ ತಗುಲಿದ ವೆಚ್ಚವೆಷ್ಟು? ಪೀಠೋಪಕರಣ ಖರೀದಿಗೆ ನೆಲಹಾಸು, ಅಡಿಗೆ ಸಾಮಾನು, ಟಿ.ವಿ. ಇತ್ಯಾದಿಗಳನ್ನು ಖರೀದಿಸಲು ಮಾಡಿದ ವೆಚ್ಚವೆಷ್ಟು? ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಹಾಗೂ ಮಂತ್ರಿಗಳ ಹೆಸರುಗಳ ಮುಂದೆ ತಗಲುವ ಅಂದಾಜು ವೆಚ್ಚ ಅಂದರೆ ಎಸ್ಟಿಮೇಟ್ ಏನಿದೆ ಅದು ಒಬ್ಬರದು 14ಲಕ್ಷ, 8 ಲಕ್ಷ ರೂಪಾಯಿಗಳು, ಮೂರು ಲಕ್ಷ ರೂಪಾಯಿಗಳು, ಈ ರೀತಿಯಾಗಿ ಎಸ್ಟಿಮೇಟ್ ಕೊಟ್ಟಿದ್ದಾರೆ. ಆದರೆ, ನಮ್ಮ ಸದಸ್ಯರ ಪ್ರಶ್ನೆ ಇರುವಂಥಾದ್ದು ಇವತ್ತಿಗೆ ಎಷ್ಟು ಖರ್ಚಾಗಿದೆ ಎಂಬುದನ್ನು ಕೇಳುತ್ತಿದ್ದಾರೆ. ಅದಕ್ಕೆ ಉತ್ತರವನ್ನು ಕೊಡುವಂಥಾದ್ದಕ್ಕೆ ಏಕೆ ಅವಾಯಿಡ್ ಮಾಡುತ್ತಿದ್ದಾರೆ.

ಅಧ್ಯಕ್ಷರು: ಅದನ್ನು ಹೇಳಿದ್ದಾರಲ್ಲಾ, ಅಷ್ಟರಲ್ಲೇ ಖರ್ಚು ಆಗಿದೆ, ಅದರ ಮೇಲೆ ಆಗಿರುವುದಿಲ್ಲವೆಂದು ಹೇಳಿದ್ದಾರಲ್ಲಾ.....

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಅಷ್ಟೇ, 14ಲಕ್ಷ ಎಂದೇ ಉತ್ತರ ಕೊಡಲಿ

ಅಧ್ಯಕ್ಷರು: ಅಷ್ಟರೊಳಗೆ ಖರ್ಚು ಆಗಿದೆ ಎಂದು ಹೇಳಿದ್ದಾರಲ್ಲಾ, ಅದರ ಮೇಲೆ ಖರ್ಚು ಆಗಿರುವುದಿಲ್ಲವೆಂದು ಹೇಳಿದ್ದಾರಲ್ಲಾ...

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದು ಎಸ್ಟಿಮೇಟ್ ಆಗಿದೆ, ಇವರ ಉತ್ತರದಲ್ಲಿ ತಗಲುವ ಅಂದಾಜು ವೆಚ್ಚವೆಂದು ಹೇಳಿದ್ದಾರೆ, ಅಂದರೆ ಇದು ಎಸ್ಟಿಮೇಟ್ ಆಗಿದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ವೆಜಿಟೇರಿಯನ್, ನಾನ್ ವೆಜಿಟೇರಿಯನ್ ವೆಚ್ಚವೆಷ್ಟು ಎಂಬುದನ್ನು ಕೇಳಲಿ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ಇಲ್ಲಿ ತೊಂದರೆ ಏನಾಗಿದೆ ಎಂದರೆ ಇವರಿಗೆ ಯಾರಿಗೂ ಮಂತ್ರಿಗಳಾಗಿ ಅನುಭವವಿಲ್ಲ. ಆದುದರಿಂದ, ಈ ಪ್ರಶ್ನೆಗಳು ಸ್ವಾಭಾವಿಕವಾಗಿ ಬರುತ್ತಿದೆ. ನಾನು ಕೇಂಬ್ರಿಡ್ಜ್ ಯೂನಿವರ್ಸಿಟಿಯಲ್ಲಿ ಓದಿದ್ದೆನೊ, ಸೋಮವಾರ ಪೇಟೆ ಯೂನಿವರ್ಸಿಟಿಯಲ್ಲಿ ಓದಿದ್ದೆನೋ, ಎಂಬ ಬಗ್ಗೆ ಮಾನ್ಯ ಅಪ್ಪಚ್ಚುರಂಜನ್‌ರವರು ಅತ್ಯಂತ ಚಾಣಾಕ್ಷರಾಗಿ ಹೇಳಿದ್ದಾರೆ. ಇನ್ನು ಮಾನ್ಯ ವಿರೋಧಪಕ್ಷದ ನಾಯಕರು ಹಕ್ಕಿಲ್ಲ ಎನ್ನುವಂಥ ಮಾತನ್ನು ಹೇಳಿದರು. ನಾನು ಆ ರೀತಿಯಾಗಿ ಹಕ್ಕಿಲ್ಲ. ಎಂದು ನಾನು ಯಾರಿಗಾದರೂ ಕೇಳಬಾರದು, 'ಹಕ್ಕಿಲ್ಲ' ಎಂದು ಹೇಳಿದ್ದೆನಾ? ನಾನು ನಿಮಗೆ ನನ್ನ ರಾಜೀನಾಮೆಯನ್ನೇ ಕೇಳುವಂತಹ ಹಕ್ಕಿದೆ ಎಂದು ಹೇಳಿದ ಮೇಲೆ ಇನ್ನು ನೀವು ನಮ್ಮ ಸೌಟ್, ಬಾಣಲಿ, ಇದರ ಬಗ್ಗೆ ಎಷ್ಟು ಖರ್ಚು ಮಾಡಿದ್ದೀರೆಂಬ ಬಗ್ಗೆ ಕೇಳುವುದಕ್ಕೆ ಹಕ್ಕಿಲ್ಲ ಎಂದು ಹೇಳುವುದಕ್ಕೆ ಆಗುತ್ತದೆಯೇ? ಮುಖ್ಯಮಂತ್ರಿಯ ಮನೆಯ ಖರ್ಚು ಸರ್ಕಾರದಿಂದ ಬಂದಿರುವಂತಹ 'ಅನುಗ್ರಹ' ಎನ್ನುವ ಮನೆಯಲ್ಲಿ ಬಾಡಿಗೆಗೆ ಇರುವಂತಹದ್ದು ಹದಿನಾಲ್ಕು ಲಕ್ಷ ರೂಪಾಯಿಗಳು ಅಂದಾಜು ವೆಚ್ಚ, ಅಷ್ಟು ಖರ್ಚಾಗಿದೆ. ಇನ್ನು ತಮಗೆ ಹೆಚ್ಚಿನ ಮಾಹಿತಿ ಬೇಕೆಂದರೆ ಸಂಪೂರ್ಣವಾದಂತಹ ವಿವರಗಳನ್ನು ಸರ್ಕಾರದ ಬಂಗಲೆಗಳ ಬಗ್ಗೆ ತಮ್ಮ ಮುಂದಿಡುತ್ತೇನೆ. 1989ರಂದು, 1994ರಂದು ಎಷ್ಟೆಷ್ಟು ಖರ್ಚಾಗಿದೆ ಎಂಬ ಮಾಹಿತಿಗಳ ಒಟ್ಟು ಸಂಗ್ರಹಣೆ ಮಾಡಿ ಈ ಸದನದ ಮುಂದಿಡುತ್ತೇನೆ. ಆಗ ಬೇಕಾದರೆ ಮಾನ್ಯ ವಿರೋಧಪಕ್ಷದ ನಾಯಕರೇ, ಈ ವಿಚಾರವಾಗಿ ಒಂದು ಗಂಟೆಯ ಚರ್ಚೆಯನ್ನು ಬೇಕಾದರೆ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಈ ರೀತಿಯಾಗಿ ವ್ಯಂಗ್ಯವಾಗಿ ಮಾತನಾಡುವಂಥಾದ್ದು ಸರಿಯಲ್ಲ. ಇವತ್ತು ನಾವು ಜನತೆಯ ಹಣವನ್ನು ಖರ್ಚು ಮಾಡುತ್ತಿದ್ದೇವೆ. ನಾವು ಇವತ್ತು ಸೌಟ್, ಚಮಚಕ್ಕೆ ಎಷ್ಟು ಖರ್ಚಾಗಿದೆ ಎಂದು ಕೇಳುತ್ತಿಲ್ಲ. ಇವತ್ತು ಮನೆಗಳಿಗೆ ಎಷ್ಟು ಖರ್ಚಾಗಿದೆ ಎಂದು ಕೇಳಿದ್ದರೆ ವ್ಯಂಗ್ಯವಾಗಿ ಮಾತನಾಡುತ್ತಿದ್ದಾರೆ. ಈ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವ ಅವಶ್ಯಕತೆ ಇಲ್ಲ. ನಮಗೂ ಯಾವ ರೀತಿಯಾಗಿ ಪ್ರಶ್ನೆಯನ್ನು ಕೇಳಬೇಕು, ಜನತೆಯನ್ನು ಯಾವ ರೀತಿಯಾಗಿ ರಕ್ಷಣೆ ಮಾಡಬೇಕೆಂದು ಗೊತ್ತು. ತಾವು ಈ ರೀತಿಯಾಗಿ ಹಗುರವಾಗಿ ಮಾತನಾಡುವಂಥಾದ್ದು ನಡೆಯುವುದಿಲ್ಲ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ನಾವು ಸಂಸದೀಯ ವಿಚಾರವಾಗಿ ಏನಾದರೂ ಕಲಿಯುವಂಥಾದ್ದು ಇದ್ದರೆ ಖಂಡಿತವಾಗಿ ಕಲಿಯುತ್ತೇವೆ. ನಾವು ಏಕೆ ಈ ಪ್ರಶ್ನೆಯನ್ನು ಕೇಳಿದ್ದೇವೆಂದರೆ ಅಪ್ರಸ್ತುತವೆನ್ನುವ ಪ್ರಶ್ನೆ ಬಂದಾಗ ಅದನ್ನು ಸ್ಟಾರ್ಡ್ ಮಾಡಿದ್ದೀರಿ. ಅದಕ್ಕೆ ಉತ್ತರ ಬಂದಿದೆ, ಉತ್ತರ ಬಂದಮೇಲೂ ಆ ಪ್ರಶ್ನೆ ಅಪ್ರಸ್ತುತವೆನ್ನುವುದಾದರೆ ನಾವು ಪ್ರಶ್ನೆ ಕೇಳುವುದು ಅಪ್ರಸ್ತುತವೇ ಎನ್ನುವ ನೋವು ನಮ್ಮನ್ನು ಕಾಡುತ್ತಿದೆ.

ಅಧ್ಯಕ್ಷರು: ಅವರು ಅಪ್ರಸ್ತುತವೆಂದು ಹೇಳುವುದಾದರೆ ಉತ್ತರವನ್ನೇ ಕೊಡುತ್ತಿರಲಿಲ್ಲ.

ಶ್ರೀ ಎ.ರಾಮದಾಸ್: ಅಪ್ರಸ್ತುತವೆಂದು ಮಾನ್ಯ ಸಭಾನಾಯಕರೆ ಹೇಳಿದಾಗ ನಮಗೆ ತುಂಬ ನೋವಾಗುತ್ತದೆ.

ಅಧ್ಯಕ್ಷರು: ಅವರು ಹೇಳಲಿಲ್ಲ.

(ಗೊಂದಲ)

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ನಾನು ಅಪ್ರಸ್ತುತ ಎನ್ನುವಂಥ ಪದವನ್ನು ಬಳಸಲಿಲ್ಲ. ಅವರು ಆಕ್ಸ್‌ಫರ್ಡ್ ಯೂನಿವರ್ಸಿಟಿ ಎಂದು ಹೇಳಿದ್ದು ಪ್ರಸ್ತುತವೇನು?

ಶ್ರೀ ಎ.ರಾಮದಾಸ್: ತಾವು ದಯಮಾಡಿ ಕಡತವನ್ನು ತೆಗೆಸಿ ನೋಡಿ.

ಶ್ರೀ ಎಸ್.ಎಂ.ಕೃಷ್ಣ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರಸ್ತುತವೇ, ಅದನ್ನು ನಾನು ಅಪ್ರಸ್ತುತವೆಂದು ಹೇಳಿದ್ದೇನೆ.

ಶ್ರೀ ಎ.ರಾಮದಾಸ್: ಖಂಡಿತವಾಗಿ ನಾವು ಆ ವಿಚಾರವನ್ನು ಹೇಳುತ್ತಿಲ್ಲ.

ಶ್ರೀ ಎಸ್.ಎಂ.ಕೃಷ್ಣ: ತಾವು ಆಕ್ಸ್‌ಫರ್ಡ್ ಎನ್ನುವಂಥ ಪದವನ್ನೂ ಉಪಯೋಗಿಸಿದ್ದು ಪ್ರಸ್ತುತವೇ ಅದನ್ನು ಮೊದಲು ಹೇಳಿ, ಮಾನ್ಯ ವಿರೋಧಪಕ್ಷದ ನಾಯಕರೇ, ವ್ಯಂಗ್ಯವಾಗಿ ಹೇಳಲಿಲ್ಲ. ಪೀಠೋಪಕರಣವೆಂದು ಕೇಳಿದರು, ಎಷ್ಟು ಕುರ್ಚಿಗಳು, ಎಷ್ಟು ಮೇಜುಗಳು, ಏನೇನೂ ಬೇಕೋ ಅದೆಲ್ಲ ವಿಷಯಗಳನ್ನು ಸಂಗ್ರಹಣೆ ಮಾಡಿ ತಮ್ಮ ಮುಂದಿಡುತ್ತೇನೆ. ಅದನ್ನು ಬೇಕಾದರೆ ಚರ್ಚೆ ಮಾಡೋಣ.

ಅಬಕಾರಿ ಇಲಾಖೆಗೆ ಬರಬೇಕಾದ ಹಣ.

28 (446)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಅಬಕಾರಿ ಇಲಾಖೆಗೆ ಬರಬೇಕಾಗಿರುವ ಬಾಕಿ ಮೊತ್ತ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ವಸೂಲಾತಿ ಕ್ರಮಗಳೇನು? ಎಷ್ಟು ವರ್ಷಗಳಿಂದ ಈ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ.ಎಂ.ನಾಣಯ್ಯ (ಅಬಕಾರಿ ರಾಜ್ಯ ಸಚಿವರು):

ಅ) ಅಸಲು ರೂ. 142.14 ಕೋಟಿ ರೂ.ಗಳು ಬಡ್ಡಿ ರೂ. 163.69 ಕೋಟಿ ರೂ.ಗಳು (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನಮೂದಿಸಿದೆ)

ಆ) 1) ಪ್ರತಿ ಪ್ರಕರಣಗಳಲ್ಲಿ ಪರಿಶೀಲಿಸಿ ಅತಿ ಶೀಘ್ರವಾಗಿ ವಸೂಲು ಕ್ರಮ ಜರುಗಿಸಲು ಅಬಕಾರಿ ಉಪ ಆಯುಕ್ತರಿಗೆ ಆಗಿಂದಾಗ್ಗೆ ಸೂಚಿಸಲಾಗುತ್ತಿದೆ. ಅಲ್ಲದೆ ಅಬಕಾರಿ ಬಾಕಿಯನ್ನು ಪರಿಣಾಮಕಾರಿಯಾಗಿ ವಸೂಲಿ ಮಾಡಲು ಸಿವಿಲ್ ನ್ಯಾಯಾಲಯಗಳು ಮಧ್ಯೆ ಪ್ರವೇಶಿಸದಂತೆ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 68 ಎ, ಬಿ, ಸಿ ಮತ್ತು ಡಿ ಗಳಿಗೆ ತಿದ್ದುಪಡಿ ತರಲಾಗಿದೆ.

2) ಹಳೇ ಬಾಕಿಯನ್ನು ಭೂ ಕಂದಾಯ ಕಾಯ್ದೆಯಡಿ ಶೀಘ್ರ ಕ್ರಮ ಕೈಗೊಂಡು ಬಾಕಿದಾರರ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ಆಗಿಂದಾಗ್ಗೆ ನೀಡಿದೆ. ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಕಾನೂನು ರೀತ್ಯ ಶೀಘ್ರವಾಗಿ ಇತ್ಯರ್ಥಪಡಿಸುವ ಸಲುವಾಗಿ ಅಬಕಾರಿ